ಆಶ್ಚರ್ಯ ಚಕಿತನನ್ನಾಗಿಸಿದವು.

"ಬೆಳಗ್ಗೆ ಸುಮಾರು ಹತ್ತಕ್ಕೆ ಅಕ್ಕ ಭಾವ ಜೋರಾಗಿ ಜಗಳ ಆಡಲು ಶುರು ಮಾಡಿದರು. ನಾನು ಎದ್ದು ರೂಮಿನಿಂದ ಹೊರಗಡೆ ಬರೋಣ ಅಂದ್ರೆ, ನನ್ನ ವೀಲ್‌ಚೇರ್ ಕೊಂಚ ದೂರ ಇತ್ತು. ಇವರ ಜಗಳ ಇದ್ದಿದ್ದೇ. ಈಗ ಜಗಳ ಆಡ್ತಾರೆ ಅರ್ಧ ಗಂಟೇಲಿ ಮತ್ತೆ ಒಂದಾಗ್ತಾರೆ ಅಂತ ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಹಾಡು ಕೇಳಿಸಿಕೊಳ್ಳುತ್ತಾ ಕೂತಿದ್ದೆ. ಮಂಗಳಾ ಬಂದಾಗಲೇ ಗೊತ್ತಾಗಿದ್ದು ..."

ಭೂಷಣ್ ಮಂಗಳಾ ಕಡೆ ತಿರುಗಿದ. ಅದಕ್ಕಾಗಿಯೇ ಕಾಯುತ್ತಿದ್ದಳೇನೋ ಎಂಬಂತೆ, "ನಾನು ಮನೇಲೇ ಇರಲಿಲ್ಲ ಸರ್... ತರಕಾರಿ ತರಲು ಹೋಗಿದ್ದೆ. ವಾಪಸ್ ಬಂದಾಗ, ಹಂಸಿನಿ ರೂಮಿನ ಬಾಗಿಲ ಮೇಲೆ ಒಂದು ಚೀಟಿ ಅಂಟಿಸಿದ್ದರು. ಭಯದಿಂದ ಮೇಲೆ ಹೋಗಿ ನೋಡಿದೆ, ಅಲ್ಲಿ ಅಣ್ಣನ್ನ ಗುಂಡು ಹೊಡೆದು ಸಾಯಿಸಿದ್ದರು..."

ಮಂಗಳಾ ತನ್ನ ಕೈಯಲ್ಲಿದ್ದ ಒಂದು ಚೀಟಿಯನ್ನು ಭೂಷಣನ ಕೈಗಿತ್ತಳು. ಅದರಲ್ಲಿ, "ಗಂಡನನ್ನು ಕೊಲೆ ಮಾಡಿದ್ದೇನೆ, ಪೊಲೀಸ್ ಸ್ಟೇಶನಿಗೆ ಹೋಗುತ್ತಿದ್ದೇನೆ... ಹಂಸಿನಿಯನ್ನು ಚೆನ್ನಾಗಿ ನೋಡಿಕೋ" ಎಂದು ಇಂಗ್ಲಿಷ್‌ನಲ್ಲಿ ಬರೆದಿತ್ತು.

ಅದೇ ಸಮಯಕ್ಕೆ ಕೆಳಗೆ ಇಳಿದು ಬಂದ ಅಮಿತಾ, "ಸರ್, ಎಲ್ಲಾ ಪ್ರೊಸೀಜರ್ ಮುಗಿಯಿತು. ನಂದಿನಿಯನ್ನು ಅರೆಸ್ಟ್ ಮಾಡಬೇಕು".

ಭೂಷಣ್ ಮಾತಾಡಲಿಲ್ಲ. ಅವನ ಮನಸ್ಸಿನಲ್ಲಿ ಏನೋ ಅನುಮಾನ! ಎಲ್ಲೋ ಏನೋ ಮಿಸ್ಸಿಂಗ್!

"ನನ್ನ ಊಹೆ ನಿಜವಾಗೊದಾದ್ರೆ, ನಂದಿನಿ ಈ ಕೊಲೆ ಮಾಡಿರಲಿಕ್ಕಿಲ್ಲ..."

ಅಲ್ಲಿದ್ದವರೆಲ್ಲ ಒಮ್ಮೆ ಬೆಚ್ಚಿದರು. ಸ್ವತಃ ತಾನೇ ಕೊಲೆ ಮಾಡಿದ್ದೇನೆ ಎಂದು ಬಂದು ಕನ್ಫೆಸ್ ಮಾಡಿಕೊಂಡಿದ್ದ ಆರೋಪಿ. ಅವಳ ಹೇಳಿಕೆಗೂ, ಕ್ರೈಂ ಸೀನ್‌ಗೂ ತಾಳೆ ಆಗುತ್ತಿದೆ. ಹಾಗಿರುವಾಗ ಭೂಷಣ್ ಇಡೀ ಕೇಸ್ ತಿರುವುಮುರುವಾಗುವಂತಹ ಮಾತುಗಳನ್ನು ಹೇಳಿದ್ದು ಎಲ್ಲರಿಗೂ ಆಶ್ಚರ್ಯ ತಂದಿತು.

"ಸರ್, ಏನು ಹೇಳ್ತಿದೀರ? ನಂದಿನಿ ತಾನೇ ಮಾಡಿದ್ದು ಅಂತ ಹೇಳುತ್ತಿದ್ದಾಳೆ..."

"ಅವಳು ಹಾಗೆ ಹೇಳಿದ್ದಾಳೆ ಅಂದ ಮಾತ್ರಕ್ಕೆ ಅದೇ ಸತ್ಯ ಅಂತ ನಂಬಲಿಕ್ಕೆ ಆಗದು. ಇಲ್ಲಿ ಬೇರೆ ಏನೋ ನಡೆದಿದೆ..."

"ಅಂದರೆ, ಅಕ್ಕ ಭಾವನನ್ನು ಕೊಲೆ ಮಾಡಿಲ್ಲವಾ?" ಹಂಸಿನಿ ಕೇಳಿದಳು; ಅವಳ ದನಿ ಬದಲಾಗಿತ್ತು.

"ನನ್ನ ಅನುಭವದಲ್ಲಿ ಹೇಳುವುದಾದರೆ ಇದೇ ಸತ್ಯ ಅಲ್ಲ. ಇದನ್ನೇ ಸತ್ಯ ಅಂತ ನಂಬಿಸಲು ಪ್ರಯತ್ನ ನಡೆಯುತ್ತಿದೆ, ಅಷ್ಟೇ..."

ಭೂಷಣ್ ಗಂಭೀರವಾಗಿ ನುಡಿದ. ಅವನ ಮಾತುಗಳು ಇಡೀ ಕೇಸನ್ನೇ ತಿರುವುಮುರುವಾಗಿಸಿತು.

"ಹಾಗಾದ್ರೆ, ನಂದಿನಿ ಅರೆಸ್ಟ್?..."

"ಕಾನೂನಿನ ಪ್ರಕಾರ ಮಾಡಲೇ ಬೇಕು, ಆದರೆ... ತನಿಖೆ ಎಲ್ಲಾ ಕೋನಗಳಿಂದಲೂ ಆಗಬೇಕು."

***

ಕ್ರೈಂ ಸೀನ್‌ನ ಫೋಟೊಗಳನ್ನು ಹರಡಿಕೊಂಡು ಅದನ್ನೇ ದಿಟ್ಟಿಸಿ ನೋಡುತ್ತಾ ಕುಳಿತಿದ್ದ ಭೂಷಣನಿಗೆ ಅಮಿತಾ ಬಂದು ಸೆಲ್ಯೂಟ್ ಮಾಡಿ ನಿಂತಿದ್ದು ಗಮನಕ್ಕೆ ಬರಲಿಲ್ಲ.

"ಸರ್, ಓಪನ್ ಅಂಡ್ ಷಟ್ ಕೇಸ್ ಇದು. ಇದಕ್ಕೆ ಇಷ್ಟೊಂದು ಯೋಚನೆಯಾ?"

ಭೂಷಣ್ ತಲೆ ಎತ್ತಿ ನೋಡಿದ.

"ಇಲ್ಲಿ ಮೂರು ಪಾಯಿಂಟ್‌ಗಳು ನನ್ನನ್ನು ಇದೊಂದು ಓಪನ್ ಅಂಡ್ ಷಟ್ ಕೇಸ್ ಅಲ್ಲ ಎಂದು ಹೇಳುತ್ತಿವೆ. ಮೊದಲನೆಯದು, ನಂದಿನಿಯ ಹೇಳಿಕೆ. ಅವರನ್ನು ವಿಚಾರಣೆ ಮಾಡಿದಾಗ, ನಂದಿನಿ ಗನ್ ತೆಗೆದು ಬಾಳಿಗಾ ಕಡೆ ತೋರಿಸಿ ಒಂದೆರಡು ಕ್ಷಣಗಳ ನಂತರ ಶೂಟ್ ಮಾಡಿದೆ ಅಂತ ಹೇಳಿಕೆ ಕೊಟ್ಟಿದ್ದಾಳೆ. ಎಂತಹವನಾದರೂ ಆ ಎರಡು ಕ್ಷಣದಲ್ಲಿ ಓಡಿ ಹೋಗಲು ಪ್ರಯತ್ನಿಸಿರಬೇಕಲ್ಲವಾ... ಅದೂ ಬಾಳಿಗಾ ಬಾಗಿಲ ಬಳಿಯೇ ನಿಂತಿದ್ದಾಗ... ಎರಡನೆಯದು, ನಂದಿನಿ ತಾನು ಶೂಟ್ ಮಾಡಿದೆ ಎಂದು ಹೇಳಿದ ಕೋನದಿಂದ ಅವಳು ಶೂಟ್ ಮಾಡಿದ ಬುಲೆಟ್ ಆರು ಅಡಿ ಎತ್ತರದ ಬಾಳಿಗಾನ ತಲೆಯ ಮೇಲ್ಭಾಗದಿಂದ ಹಾರಿಹೋಗಬೇಕಿತ್ತು. ಅಕಸ್ಮಾತ್ ಹಾರಿದರೂ ಆ ಗುಂಡು ತಗುಲಿದ ತಕ್ಷಣ ದೇಹ ಕೊಂಚ ಬಾಗುತ್ತದೆ... ಎರಡನೆಯ